ಮೂಡುತ್ತಿದೆ ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ಕೂಡ ಒಂದು ಸೆಕ್ಯುರಿಟಿ ಕೊಡತಕ್ಕಂಥದು ಸರ್ಕಾರದಲ್ಲಿ ಇದೆ. ಈಗಾಗಲೇ ಹೆಚ್ಚು ರಕ್ಷಣೆ ಕೊಟ್ಟಿದ್ದೇವೆ ಮತ್ತು ಅಧಿಕಾರಿಗಳಿಗೂ ಕೂಡ ನಾನು ಹೇಳಿದ್ದೇನೆ. ಇಂಥ ಒಂದು ಜ್ವಲಂತ ಸಮಸ್ಯೆಗಳ ಬಗ್ಗೆ ಸರ್ಕಾರ ನಿಗಾ ವಹಿಸಿ ಕೆಲಸ ಮಾಡತಕ್ಕಂಥ ಎನ್ನತಕ್ಕಂಥ ಮಾತನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ತಾವೆ ಹೇಳಿದಂತೆ ಯಾತ್ರಾಸ್ಥಳಗಳಿಗೆ ದೊಡ್ಡ ದೊಡ್ಡ ಅಣೆಕಟ್ಟುಗಳಿಗೆ ತಕ್ಷಣ ಮಫ್ತಿನಲ್ಲಿಯೋ ಅಥವಾ ಬೇರೆ ರೀತಿನಲ್ಲಿಯೋ ಬಂದೋಬಸ್ತು ಮಾಡುವ ಸಲುವಾಗಿ ನೀವು ಸೂಚನೆಯನ್ನು ಕೊಡುವುದು ಒಳ್ಳೆಯದು. ಇದು ನನ್ನ ಸಲಹೆ ನೀವು ಇದನ್ನು ಆದಷ್ಟು ಬೇಗ ಮಾಡಬೇಕು.

ಶ್ರೀ ಧರ್ಮಸಿಂಗ್: ಸಭೆ ಮಾಡಿ ಚರ್ಚೆ ಮಾಡುತ್ತಿದ್ದೇವೆ. ತಮ್ಮನ್ನು ಕೂಡ ಕರೆದು ಸಭೆ ಮಾಡಬೇಕೆಂದು ಅನ್ನುತ್ತಿದ್ದೀರೇನು? ಬೇಕಾದರೆ ನೋಡಿ ಮಾಡುತ್ತೇವೆ.

ಉಪಾಧ್ಯಕ್ಷರು: ಧರ್ಮೆಗೌಡರೆ,

ಶ್ರೀ ಜೆ.ಸಿ. ಮಾಧುಸ್ವಾಮಿ: ಮಾನ್ಯ ಶ್ರೀನಿವಾಸಗೌಡರಿಗೆ ಇಲ್ಲಿ ಕುಳಿತುಕೊಳ್ಳಲು ಹೇಳಿ ಸರಿಯಾಗುತ್ತದೆ.

ಶ್ರೀ ಎಸ್.ಎಲ್. ಧರ್ಮೆಗೌಡ: ಮಾನ್ಯ ಉಪಾಧ್ಯಕ್ಷರೆ, ಅದೇ ವಿಷಯದಲ್ಲಿ ಮಾನ್ಯ ಕುಮಾರಸ್ವಾಮಿಯವರು ಮಾತನಾಡಿದ್ದಾರೆ. ತಾವು ಏನು ಬಿಪಿಎಲ್ ಕಾರ್ಡ್‌ನ್ನು ಕೊಡುವಂಥ ವಿಚಾರದಲ್ಲಿ ಈಗಾಗಲೇ ಬಯಲುಸೀಮೆ ಕಡೆ ಕೊಳವೆಬಾವಿಗಳು ಇದೆ, ಕೊಳವೆಬಾವಿಗಳೂ ಬತ್ತಿ ಹೋಗಿವೆ, ಬಿಪಿಎಲ್ ಕಾರ್ಡ್ ಕೊಡುವುದಿಲ್ಲವೆಂದು ಹೇಳುತ್ತಿದ್ದೀರಿ, ದಯಮಾಡಿ ಅದು ಮತ್ತು ಫೋನಿನ ಬಗ್ಗೆ ಸಡಿಲ ಮಾಡಬೇಕಾಗುತ್ತದೆ.

ಉಪಾಧ್ಯಕ್ಷರು: ಮಾನ್ಯ ಧರ್ಮೆಗೌಡರೆ ನಿಮ್ಮ ಸಬ್ಜೆಕ್ಟ್ ಬೇರೆ, ನಿಮ್ಮ ಸಬ್ಜೆಕ್ಟ್ ಅದಲ್ಲ, ನೀವು ಕೊಟ್ಟಿರುವುದೆ ಬೇರೆ ಸಬ್ಜೆಕ್ಟ್, ನೀವು ಇಲ್ಲಿ ಮಾತನಾಡುವುದೇ ಬೇರೆ.

ಶ್ರೀ ಎಂ.ಪಿ. ಪ್ರಕಾಶ್: ಈ ವಿಷಯದ ಬಗ್ಗೆ ಆಗಲೇ ಪ್ರಸ್ತಾಪ ಮಾಡಿದ್ದಾರೆ. 38 ಕುರಿಗಳೂ ಸತ್ತಿದ್ದು 77 ಮನೆಗಳೂ ಬಿದ್ದಿದ್ದು ಅದಕ್ಕೆ ನಾನು ಆಗಲೆ ಉತ್ತರವನ್ನು ಕೊಟ್ಟಿದ್ದೇನೆ. ಅದಕ್ಕೆ ಅವರು ಸಮಾಧಾನವಾಗಿದ್ದಾರೆ. ಆದ್ದರಿಂದ ಅದನ್ನು ತಾವು ಕೈ ಬಿಡಬೇಕು.

ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ): ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗಾ ಜಿಲ್ಲೆಯಲ್ಲಿ ಭೀಕರ ಬರಗಾಲ ರೈತರ ಸಮಸ್ಯೆ ಮತ್ತು ಕೂಲಿಕಾರರ ಸಮಸ್ಯೆಯ

ಬಗ್ಗೆ ಮಾತನಾಡಲು ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಹೇಳುತ್ತೇನೆ. ಇಡೀ ಮನುಷ್ಯನ ಜೀವನದಲ್ಲಿ ಮೊದಲನೆಯ ಜ್ವರ ಬಂದರೆ ತಾಳಿಕೊಳ್ಳಬಹುದು, ಎರಡನೇ ಜ್ವರ ಬಂದರೆ ಉಳಿಯಬಹುದು, ಮೂರನೆಯ ಜ್ವರಕ್ಕೆ ಆ ಕಡೆಗೆ ಹೋಗುತ್ತಾನೆಂದು ಹಿರಿಯರು ಹೇಳುತ್ತಾರೆ. ಆದರೆ ನಮ್ಮ ಗುಲ್ಬರ್ಗಾ ಜಿಲ್ಲೆಗೆ ಈಗ ಮೂರನೇ ಬರಗಾಲ ಆಗಿ ನಾಲ್ಕನೆಯ ಬರಗಾಲ ಬರುತ್ತಿದೆ. ರೈತರು, ಕೂಲಿಕಾರ್ಮಿಕರು ಕಂಗಾಲಾಗಿದ್ದಾರೆ. ಕುಡಿಯುವ ನೀರಿನ ಸಮಸ್ಯೆ ಹಾಹಾಕಾರವಾಗಿದೆ. ಜಾನುವಾರುಗಳಿಗೆ ಮೇವಿನ ಹಾಹಾಕಾರವಿದೆ. ಎತ್ತುಗಳಿಗೆ ಕಸಾಯಿಖಾನೆ ತೋರಿಸುತ್ತಿದ್ದಾರೆ. ಬಸ್ ಸ್ಟಾಂಡ್, ರೈಲ್ವೆ ಸ್ಟೇಶನ್ ಗಳಲ್ಲಿ ಹೋದರೆ ಕೂಲಿಕಾರ್ಮಿಕರು ಹೊರಗಿನ ದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ನಾನು ನನ್ನ ಮತ್ತು ಆಳಂದ ಕ್ಷೇತ್ರದಲ್ಲಿ ಪ್ರವಾಸ ಮಾಡಿದಾಗ ನಮ್ಮ ಜಿಲ್ಲೆಯವರೆ ಮುಖ್ಯಮಂತ್ರಿಗಳಿದ್ದಾರೆ, ಅವರಿಗೆ ಎಲ್ಲಾ ರಿಪೋರ್ಟ್ ಗ ಇರುತ್ತದೆ, ತಾವು ಕೂಡ ಎಂಎಲ್ ಎ ಇದ್ದೀರಿ, ಕಣ್ಣುಮುಚ್ಚಿಕೊಂಡು ಕುಳಿತಿದ್ದೀರಿ ಎಂದು ನಮಗೆ ಛೇರಾವು ಮಾಡಿ ರೈತರು, ಕೂಲಿಕಾರ್ಮಿಕರು ಕೇಳುತ್ತಿದ್ದಾರೆ. ತಮ್ಮ ಮುಖಾಂತರ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಇದು ನಾಲ್ಕನೇ ಬರಗಾಲ ಇದನ್ನು ಎದುರಿಸಲಿಕ್ಕೆ ಸಾಧ್ಯವಿಲ್ಲ. ರೈತರ ಉಳಿವಿಗಾಗಿ ಕೂಲಿಕಾರ್ಮಿಕರ ಉಳುವಿಗಾಗಿ ಅವರ ಹಿತರಕ್ಷಣೆಗಾಗಿ ಒಂದು ಬರಗಾಲ ಘೋಷಣೆ ಮಾಡಬೇಕು. ರೈತರ ಹಾಗೆ ಅನುಕೂಲ ಮಾಡಬೇಕು, ಕೂಲಿಕಾರ್ಮಿಕರಿಗೆ ಕೆಲಸ ಸಿಗಬೇಕು, ಕುಡಿಯುವ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಬೇಕು. ತಮ್ಮ ಸರ್ಕಾರಕ್ಕೆ ಒಳ್ಳೆಯ ಹೆಸರು ಬರುತ್ತದೆ. ಜನರ ಸಮಸ್ಯೆಯನ್ನು ಪರಿಹಾರ ಮಾಡುತ್ತೀರೆಂದು ನಾನು ತಮ್ಮ ಮುಖಾಂತರ ನಾನು ಒತ್ತಾಯವನ್ನು ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ದುರ್ದೈವ ಸಂಗತಿ ಈ ಭಾರಿಯೂ ಕೂಡ ನಾವು ನಿರೀಕ್ಷಿತ ಪ್ರಮಾಣದಲ್ಲಿ ಮಳೆ ಬರುತ್ತಿಲ್ಲ. ಮುಂಗಾರಿ ಹಂಗಾಮಿನಲ್ಲಿ ಎಲ್ಲಾ ಕಡೆಗೂ ಕೂಡ ವ್ಯಾಪಾಕವಾಗಿ ಮಳೆ ಆಗಬೇಕಾಗಿತ್ತು. ಆದರೆ ಅದರ ಪ್ರಕಾರ ಮಳೆಯಾಗದೇ ಇದ್ದು ಅನೇಕ ಪ್ರದೇಶಗಳು ತೊಂದರೆಗಳಿಗೆ ಸಿಲುಕಿದ್ದು ಮತ್ತು ಬೆಳೆಯನ್ನು ಬೆಳೆಯಲು ಸಾಧ್ಯವಾಗದೇ ಇರತಕ್ಕಂಥದ್ದು ಕೂಡ ಮನವರಿಕೆಯಾಗಿದೆ.

ಇನ್ನು ಎರಡು ದಿವಸದೊಳಗಾಗಿ ಬರಗಾಲಕ್ಕೆ ಸಂಬಂಧಪಟ್ಟಂತ ಸಚಿವ ಸಂಪುಟದ ಉಪ ಸಮಿತಿಯನ್ನು ಕರೆದು ಮತ್ತೆ ಇದರ ಪುನರ್ ವಿಮರ್ಶೆಯನ್ನು ಮಾಡತಕ್ಕಂಥದ್ದು ಹವಾಮಾನ ವರದಿ ಜಿಲ್ಲಾಧಿಕಾರಿಗಳ ವರದಿ ಇವುಗಳಿಗೆ ಈಗಾಗಲೇ ಬರೆದು ಕಳುಹಿಸಿದ್ದೇವೆ. ವಾಡಿಕೆ ಮಳೆಗಳಿಗಿಂತ ಕಡಿಮೆಯಾಗಿರತಕ್ಕಂಥದ್ದು ಅದರ

ವಿವರಗಳು ಕೂಡ ನಮಗೆ ಬಂದಿವೆ. ಆ ಕಾರಣಕ್ಕಾಗಿ ಅವರು ಕೇಳಿರತಕ್ಕಂಥ ಈ ಪ್ರದೇಶವನ್ನು ಬರಗಾಲವೆಂದು ಘೋಷಿಸಬೇಕೆಂದು ಹೇಳಿದ್ದಾರೆ. ಈ ಘೋಷಣೆ ಮಾಡಬೇಕಾದಂಥ ಸಂದರ್ಭಗಳಲ್ಲಿ ಇರಬೇಕಾದ ಮಾನದಂಡಗಳಿಗೆ ಅನುಗುಣವಾಗಿ ಇದೆಯೆ ಅಥವಾ ಇಲ್ಲ ಎನ್ನತಕ್ಕಂಥದ್ದು ಗುಲ್ಬರ್ಗ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದಲೂ ಕೂಡ ವರದಿಯನ್ನು ತರಿಸಿಕೊಳ್ಳುತ್ತೇವೆ. ಆ ವರದಿಯ ನಂತರ ಪ್ರಾಯಶಃ ಈ ಗಂಭೀರ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಬೇಕಾದ ಸಿದ್ಧತೆಯನ್ನು ಮಾಡಿಕೊಂಡಿದ್ದೇವೆ. ಈಗ ಕೇಂದ್ರ ಸರ್ಕಾರ ನೇರವಾಗಿ ಈ ಸಾಲಿನಲ್ಲಿ ನಮಗೆ ಹಣಕಾಸಿನ ನೆರವನ್ನು ಪ್ರಕೃತಿ ವಿಕೋಪ ನಿಧಿಯಿಂದ ಕೊಡುವುದಾಗಲಿ ಅಥವಾ ಕೂಲಿಗಾಗಿ ಕಾಳು ಯೋಜನೆಗಾಗಿ ಸಂಬಂಧಿಸಿದಂತೆ ಆಹಾರಧಾನ್ಯವನ್ನು ಬಿಡುಗಡೆ ಮಾಡತಕ್ಕಂಥದ್ದಾಗಲಿ ಅದಕ್ಕೆ ಅವರದೇ ಆದ ಮಾನದಂಡಗಳು ಇವೆ. ಅದರ ಜೊತೆಗೆ ಅವರು ಕೇಂದ್ರ ಸರ್ಕಾರದಿಂದ ಅಧ್ಯಾಪನಾ ತಂಡವನ್ನು ಕಳುಹಿಸಿಕೊಡುತ್ತಾರೆ. ಆ ಅಧ್ಯಯನ ತಂಡ ಈ ಬಗ್ಗೆ ವರದಿಯನ್ನು ಕಳುಹಿಸಿಕೊಡಬೇಕಾಗುತ್ತದೆ. ಇಂತಹ ಪೂರಕ ಸಿದ್ಧತೆಗಳನ್ನು ನಾವು ಸರ್ಕಾರದಿಂದ ಈಗಾಗಲೇ ಮಾಡುತ್ತಿದ್ದೇವೆ. ಆ ಪ್ರಕಾರವಾಗಿ ಆದ ತಕ್ಷಣವೇ ಘೋಷಣೆಯನ್ನು ಮಾಡತಕ್ಕಂಥ ವಿವರಗಳನ್ನು ಕೂಡ ಕೈಗೊಳ್ಳುತ್ತೇವೆ. ಇದರ ಜೊತೆಗೆ ಕುಡಿಯುವ ನೀರಿನ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ನಮಗೆ ಗೊತ್ತಿರುವಂತೆ ಜಿಲ್ಲಾಧಿಕಾರಿಗಳ ಹತ್ತಿರ ಮೊದಲಿದ್ದಂಥ ಮೇವು ಅದರ ಅಗತ್ಯತೆ ಇಲ್ಲವೆಂದು ಹೇಳಿ ವಿಲೇವಾರಿ ಮಾಡಿದ್ದೇವೆ. ಆದರೆ ಕಳೆದ ಭಾರಿ ಸಂಗ್ರಹ ಮಾಡಿದ್ದಂಥ ಮೇವು ಅದು ಅರ್ಹವಾಗಿಲ್ಲ ದನಕರುಗಳೂ ಮೇಯಲಿಕ್ಕೆ ಸರಿ ಇಲ್ಲ ಕೊಳೆತಿದೆ ಎನ್ನುವ ವರದಿ ಇರುವ ಹಿನ್ನೆಲೆಯಲ್ಲಿ ಮತ್ತು ಹೊಸದಾಗಿ ಮೇವು ಬೆಳೆಯತಕ್ಕಂಥದ್ದು ಮತ್ತು ದನಕರುಗಳಿಗೆ ಮೇವಿನ ವಿಚಾರದಲ್ಲಿಯೂ ಕೂಡ ಸಂಗ್ರಹ ಮಾಡತಕ್ಕಂತ ರೀತಿಯಲ್ಲಿ ಇವತ್ತು ಯೋಚನೆಯನ್ನು ಮಾಡುತ್ತಿದ್ದೇವೆ. ಇನ್ನು ಹಿಂಗಾರಿ ಹಂಗಾಮು ಇದೆ. ಒಳ್ಳೆಯ ಮಳೆ ಬರಬಹುದು ಎನ್ನುವಂತ ಆಸೆ ಕೂಡ ನಮಗೆ ಇದೆ. ಕುಡಿಯುವ ನೀರಿವ ವಿಚಾರದಲ್ಲಿ ತಾವು ಏನು ಪ್ರಸ್ತಾಪವನ್ನು ಮಾಡಿದ್ದೀರಿ. ಗ್ರಾಮೀಣ ಅಭಿವೃದ್ಧಿ ಇಲಾಖೆಯವರು ಕೂಡ ಅದಕ್ಕೆ ತಮ್ಮದೇ ಆದಂಥ ಯೋಜನೆಯನ್ನು ರೂಪಿಸಿದ್ದಾರೆ. ಆ ಯೋಜನೆಗೆ ಪೂರಕವಾದಂಥ ರೀತಿಯಲ್ಲಿ ನಮ್ಮಲ್ಲಿ ಹಣ ಇದೆ, ಪ್ರಕೃತಿ ವಿಕೋಪ ನಿಧಿಯಿಂದ ನಾವು ಹಣವನ್ನು ಕೊಡುತ್ತೇವೆ. ಕುಡಿಯುವ ನೀರಿಗೆ ತಾವು ಯಾವ್ಯಾವ ಸಲಹೆಯನ್ನು ಕೊಡುತ್ತೀರಿ, ಬರೀ ನಾವು ಕೊಳವೆಬಾವಿ ತೆಗೆಯುವುದರಿಂದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ನಮಗೆ ಅಂತರ್ಜಲ ಬಹಳ ಕಡಿಮೆಯಾಗಿದೆ ಬೇರೆ ಬೇರೆ ಕಡೆಯಿಂದ ಕೂಡ ತರಬೇಕಾದಂಥದ್ದು ಇದೆ. ಬರಗಾಲ ಕಾಮಗಾರಿಯ ಮಾನದಂಡದ ಪ್ರಕಾರ ಗ್ರಾಮೀಣ ಅಭಿವೃದ್ಧೀ ಇಲಾಖೆಯವರು ತೋಡಿಸುತ್ತಾರೆ.

ಅದಕ್ಕೆ ಪೈಪ್ ಲೈನ್ ಇರತಕ್ಕಂಥದ್ದನ್ನು ನಾವು ಕೊಡುತ್ತೇವೆ. ಆ ಪ್ರಕಾರವಾಗಿ ನಾವು ಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಸಿ.ಟಿ.ರವಿ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೆ, ನನಗೆ ಅನುಮತಿ ಕೊಟ್ಟಿದ್ದಕ್ಕೆ ತಮಗೆ ವಂದಿಸುತ್ತೇನೆ. ಕಳೆದ 54 ಗಂಟೆಗಳಿಂದ ಗ್ರಾಮ ವಿದ್ಯುತ್ ಪ್ರತಿನಿಧಿಗಳು ಜಕ್ಕರಾಯನಕೆರೆ ಮೈದಾನದಲ್ಲಿ ತಮ್ಮ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಧರಣಿ ಕುಳಿತಿದ್ದಾರೆ. ದುರ್ದೈವದ ಸಂಗತಿ ಪ್ರಜಾಸತ್ತಾತ್ಮಕ ರೀತಿಯಲ್ಲಿ ಹೋರಾಟ ಮಾಡುತಿರತಕ್ಕಂಥ ಆ ಪ್ರತಿನಿಧಿಗಳ ಅಹವಾಲನ್ನು ಕೇಳಲಿಕ್ಕೆ ಕೂಡ ಸರ್ಕಾರದ ಕಡೆಯಿಂದ ಯಾರು ಹೋಗಿಲ್ಲ. ಶಾಂತಿಯುತವಾಗಿ ಯಾರು ಅಲ್ಲಿ ಧರಣಿ ಮಾಡುತ್ತಿದ್ದಾರೆ ಅವರನ್ನು ಪೊಲೀಸ್ ಬಲದ ಮೂಲಕ ಹೊರಗೆ ಹಾಕಿಸಲಿಕ್ಕೆ ಗಾಂಧೀನಗರದ ಇನ್ಸ್‌ಪೆಕ್ಟರ ದಬ್ಬಾಳಿಕೆ ನಡೆಸಿ ಹೊರಗೆ ಹಾಕಿದ ಶಾಸಕರ ಜೊತೆಯಲ್ಲಿ ಮಾತನಾಡುತ್ತೇವೆಂದು ಹೇಳಿದರೆ ಯಾವ ಶಾಸಕರ ಜೊತೆಯಲ್ಲಿ ಮಾತನಾಡುತ್ತೀರಿ ಎಂದು ಅವ್ಯಾಚ್ಯವಾಗಿ ಶಾಸಕರನ್ನು ನಿಂದಿಸುವಂಥ ಕೆಲಸವನ್ನು ಮಾಡಿದ್ದಾರೆ. ಮಾನ್ಯ ವಾಟಾಳ್ ನಾಗರಾಜ್‌ರವರು ಮಧ್ಯೆದಲ್ಲಿ ಅವರು ಪ್ರವೇಶ ಮಾಡಿ ಧರಣಿ ನಡೆಸಲು ಅನುಮತಿಯನ್ನು ಕೊಡಿಸುವಂತ ಸ್ಥಿತಿ ಬಂದಿದೆ. ಹಾಗಾಗಿ ಆ ಗ್ರಾಮ ವಿದ್ಯುತ್ ಪ್ರತಿನಿಧಿಗಳ ಬೇಡಿಕೆಯನ್ನು ಕೂಲಂಕುಷವಾಗಿ ಸರ್ಕಾರ ಪರಿಶೀಲಿಸಿ ಪರಿಗಣಿಸಬೇಕು. ಅವರನ್ನು ಏಕಾಏಕಿಯಾಗಿ ಅವರಿಂದ ಡೆಪಾಸಿಟ್ ಕಟ್ಟಿಸಿಕೊಂಡು ಒಂದು ಲಕ್ಷ, 80 ಸಾವಿರ ರೂ.ಗಳ ಡಿಪಾಸಿಡ್ ಕಟ್ಟಿಸಿಕೊಂಡು 5 ತಿಂಗಳಿನಿಂದ ಸಂಬಳವನ್ನು ಕೊಡದೇ ಬಿಟ್ಟರೆ ಆ ಜನ ಏನಾಗಬೇಕು. ಡಿಪಾಸಿಟ್ ಹೋಯಿತು. ಈ ಕಡೆ ಗೌರವಧನ ಇಲ್ಲದಿರುವ ಪರಿಸ್ಥಿತಿಯಲ್ಲಿ ಆ ಗ್ರಾಮ ವಿದ್ಯುತ್ ಪ್ರತಿನಿಧಿಗಳಿದ್ದಾರೆ. ಹಾಗಾಗಿ ಅವರ ಬೇಡಿಕೆ ಬಗ್ಗೆ ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸಬೇಕು ಮತ್ತು ಈ ಕ್ಷಣದಲ್ಲಿಯೇ ಆ ಧರಣಿ ನಡೆಸುತ್ತಿರುವಂಥ ಸ್ಥಳಕ್ಕೆ ಸರ್ಕಾರದ ಪ್ರತಿನಿಧಿಯನ್ನು ಕಳುಹಿಸಿಕೊಡಬೇಕೆನ್ನುವ ಒತ್ತಾಯವನ್ನು ತಮ್ಮ ಮೂಲಕ ಸರ್ಕಾರಕ್ಕೆ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ತಮಗೆ ಹೇಳುತ್ತೇವೆ, 6 ಸಾವಿರ ಜನ ಊರಿಗೆ ಬಂದಿದ್ದಾರೆ. ಮಳೆಯಲ್ಲಿ ನೆನೆಯುತ್ತಿದ್ದರೆ ಸರಿಯಾದ ಸ್ಥಳ ಕೊಡಲಿಲ್ಲ. ಬೀದಿಗೆ ಹಾಕತಕ್ಕಂಥ ಪರಿಸ್ಥಿತಿಯಾಯಿತು. ಅವರಿಗೆ 5–6 ತಿಂಗಳಿನಿಂದ ಸಂಬಳ ಕೊಟ್ಟಿಲ್ಲ. ಮನವಿಯನ್ನು ಸಲ್ಲಿಸೋಣವೆಂದು ಬಂದರೆ ಅವರು ಕಂಪ್ಲೀಟ್ ಬೀದಿಯಿಂದ ಹೊರಗಡೆ, ಜಕ್ಕರಾಯನಕೆರೆಗೆ, ಈ ಕಡೆಗೆ ಅವರನ್ನು ಬಿಡಲೇ ಇಲ್ಲ. ಅವರನ್ನು ಜಕ್ಕರಾಯನಕೆರೆಗೆ ಹಾಕಿದ್ದಾರೆ. ಈ ಪರಿಸ್ಥಿತಿ ಇರುವಾಗ ತಾವೆಲ್ಲಾ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಇರತಕ್ಕಂಥವರು ಸ್ವಲ್ಪ ಸಾವಧಾನವಾಗಿ ಇಂತಹವರು ಬಂದಾಗ ಮೆರವಣಿಗೆ ಬಂದಾಗ ಅವರನ್ನು ನೋಡಿ ಮಾಡಿ ತಾವು ಹೋಗದಿದ್ದರೆ